(ಈ)(1) ಮೀನುಗಾರರ ಸಹಕಾರ ಸಂಘಗಳಿಗೆ ಕೆರೆಗಳನ್ನು ಗುತ್ತಿಗೆ ನೀಡಿ ಹಾಗೂ ಭೀಮಾ ನದಿಭಾಗದಲ್ಲಿ 70 ಮೀನುಗಾರರಿಗೆ ಪರವಾನಿಗೆ ನೀಡಿ ಮೀನುಗಾರಿಕೆ ಕೈಗೊಳ್ಳಲು ಅವಕಾಶ ನೀಡಲಾಗಿದೆ.

(2) ಖಾಸಗಿ ಬಾವಿ ಮತ್ತು ಹೋಂಡಗಳನ್ನು ಹೊಂದಿದ ರೈತರಿಗೆ ತಲಾ 250 ಮೀನುಮರಿಗಳನ್ನು ಉಚಿತವಾಗಿ 90 ಜನರಿಗೆ ವಿತರಿಸಲಾಗಿದೆ.

(3) ಮೀನುಗಾರರಿಗೆ ಅಗತ್ಯ ವಸ್ತುಗಳ ಖರೀದಿಗೆ ಶೇ. 33 ರಷ್ಟು ಸಹಾಯಧನವನ್ನು 23 ಫಲಾನುಭವಿಗಳಿಗೆ ನೀಡಲಾಗಿದೆ.

(4) ಮೀನುಮಾರುಕಟ್ಟೆ ಮತ್ತು ಮತ್ಸ್ಯವಾಹಿನಿ ಯೋಜನೆಯಡಿ ಶೇ.50 ರಷ್ಟು ಸಹಾಯಧನವನ್ನು 16 ಜನ ಫಲಾನುಭವಿಗಳಿಗೆ ನೀಡಲಾಗಿದೆ.

(5) ಅಗತ್ಯ ವಸ್ತುಗಳ ಖರೀದಿಗಾಗಿ ಮೀನುಗಾರರ ಸಹಕಾರ ಸಂಘದ ಮೂಲಕ 12 ಜನ ಫಲಾನುಭವಿಗಳಿಗೆ ತಲಾ 2000 ರಂತೆ ಸಾಲ ನೀಡಲಾಗಿದೆ.

(6) ಮಹಿಳಾ ಸ್ವಾವಲಂಬನೆ ಯೋಜನೆಯಡಿ ಮೀನುಗಾರರ ಸಹಕಾರ ಸಂಘ ನಿ., ಚಡಗಾಂವ್ ಇವರಿಗೆ ರೂ. 20,000/– ಆವರ್ತಕ ನಿಧಿ ನೀಡಲಾಗಿದೆ.

(7) ಮೀನುಮರಿ ಖರೀದಿಗೆ ಸಹಾಯಧನ ಯೋಜನೆಯಡಿ 4 ಮೀನುಗಾರರ ಸಹಕಾರ ಸಂಘಗಳು ಹಾಗೂ 4 ಜನ ಫಲಾನುಭವಿಗಳಿಗೆ ಒಟ್ಟು ರೂ. 61493/– ಸಹಾಯಧನ ವಿತರಿಸಲಾಗಿದೆ.

(8) ವಿಶೇಷ ಘಟಕ ಯೋಜನೆಯಲ್ಲಿ 29 ಜನ ಪರಿಶಿಷ್ಟ ಜಾತಿ ಮೀನುಗಾರ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆಗಳನ್ನು ವಿತರಿಸಲಾಗಿದೆ.

(9) ಗಿರಿಜನ ಉಪಯೋಜನೆಯಲ್ಲಿ 22 ಜನ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆಗಳನ್ನು ವಿತರಿಸಲಾಗಿದೆ.

(10) ಮತ್ಸ್ಯಾಶ್ರಯ ಯೋಜನೆ ಅಡಿ 2009–10ನೇ ಸಾಲಿನಲ್ಲಿ 10 ಜನ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆ.

ಜಲ ನಿರ್ಮಲ ಯೋಜನೆಯ ಅನುಷ್ಠಾನ

421 (735) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಗ್ರಾಮೀಣ ಪ್ರದೇಶಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ವಿಶ್ವ ಬ್ಯಾಂಕಿನ ನೆರವಿನಿಂದ ಜಲನಿರ್ಮಲ ಒಂದನೇ ಹಂತದ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ; ಇದಕ್ಕಾಗಿ ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

(ಆ) ಮೇಲ್ಕಂಡ ಯೋಜನೆಯನ್ನು 2ನೇ ಹಂತಕ್ಕೆ ವಿಸ್ತರಿಸಲು ವಿಶ್ವಬ್ಯಾಂಕ್ ಒಪ್ಪಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಇದಕ್ಕೆ ಅಗತ್ಯವಿರುವ ಹಣವೆಷ್ಟು;

(ಇ) ಮೇಲ್ಕಂಡ 2ನೇ ಹಂತದ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು; ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು;

(ಈ) ಮೇಲ್ಕಂಡ ಯೋಜನೆಯ ಅನುಷ್ಠಾನದಲ್ಲಿ ಕಳೆದ ಒಂದು ವರ್ಷದಿಂದ ಯಾವ ಯಾವ ಜಿಲ್ಲೆಗಳು ಎಷ್ಟೆಷ್ಟು ಪ್ರಗತಿಯನ್ನು ಸಾಧಿಸಿವೆ;

(ಉ) ಯಾವ ಯಾವ ಜಿಲ್ಲೆಗಳು ಜಲ ನಿರ್ಮಲ ಯೋಜನೆಯ ಅನುಷ್ಠಾನದಲ್ಲಿ ಮುಂಚೂಣಿಯಲ್ಲಿವೆ; ಯಾವ ಯಾವ ಜಿಲ್ಲೆಗಳು ಈ ಯೋಜನೆ ಅನುಷ್ಠಾನದಲ್ಲಿ ಕಳಪೆ ಸಾಧನೆ ತೋರಿವೆ ಮತ್ತು ಯಾವ ಯಾವ ಜಿಲ್ಲೆಗಳಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಭ್ರಷ್ಟಾಚಾರದ ದೂರುಗಳಿವೆ (ಪೂರ್ಣ ವಿವರ ಒದಗಿಸುವುದು)?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

(ಅ) ಗ್ರಾಮೀಣ ಪ್ರದೇಶಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ವಿಶ್ವಬ್ಯಾಂಕಿನ ನೆರವಿನಿಂದ ಜಲನಿರ್ಮಲ ಒಂದನೇ ಹಂತದ ಯೋಜನೆಯನ್ನು ರಾಜ್ಯದ ಉತ್ತರ ಕರ್ನಾಟಕದ 11 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದ್ದು, ಮೇ–2010 ಮಾಹೆಯ ಅಂತ್ಯದವರೆಗೆ ರೂ. 871.51 ಕೋಟಿಗಳ ಹಣವನ್ನು ವೆಚ್ಚ ಮಾಡಲಾಗಿದೆ. ಜಿಲ್ಲಾವಾರು ಅಂಕಿ ಅಂಶಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.

(ಆ) ಹೌದು, ಮೇಲ್ಕಂಡ ಯೋಜನೆಯನ್ನು ಒಟ್ಟು ರೂ. 810 ಕೋಟಿಗಳ ಅಂದಾಜು ಮೊತ್ತದಲ್ಲಿ 2ನೇ ಹಂತಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಗೆ 150 ಮಿಲಿಯನ್ ಯುಎಸ್ $ (ರೂ. 697.50 ಕೋಟಿಗಳು) ಹೆಚ್ಚುವರಿ

ನೆರವನ್ನು ನೀಡಲು ವಿಶ್ವಬ್ಯಾಂಕ್ ಒಪ್ಪಿರುತ್ತದೆ.

(ಇ) ಮೇಲ್ಕಂಡ 2ನೇ ಹಂತದ ಯೋಜನೆಯನ್ನು ರಾಜ್ಯದ ಉತ್ತರ ಕರ್ನಾಟಕದ 10 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಾಗೂ ನೀರಿನ ಗುಣಮಟ್ಟವು ಆತಂಕಕ್ಕೆ ಕಾರಣವಾಗಿರುವ ಇತರೆ ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಇದಕ್ಕಾಗಿ ರೂ. 810 ಕೋಟಿಗಳ ಹಣವನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

(ಈ) ಮೇಲ್ಕಂಡ ಮೊದಲನೇ ಹಂತದ ಯೋಜನೆಯ (ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆ) ಅನುಷ್ಠಾನದಲ್ಲಿ ಕಳೆದ ಒಂದು ವರ್ಷದಿಂದ (ಏಪ್ರಿಲ್-2009 ರಿಂದ ಮೇ-2010 ರವರೆಗೆ) ಸಾಧಿಸಲಾದ ಪ್ರಗತಿಯ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

(ಉ) ಜಲ ನಿರ್ಮಲ ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಸಮುದಾಯದ ಸಹಭಾಗಿತ್ವದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಎಲ್ಲಾ ಯೋಜನಾ ಜಿಲ್ಲೆಗಳಲ್ಲೂ ಯೋಜನೆಯು ಸಮರ್ಪಕವಾಗಿ ಅನುಷ್ಠಾನಗೊಂಡಿದ್ದು, ಹಾವೇರಿ ಜಿಲ್ಲೆಯ ಬಹು ಗ್ರಾಮ ಯೋಜನೆಗಳ ಅನುಷ್ಠಾನ ಮಾತ್ರ ವಿಳಂಬಗೊಂಡಿರುತ್ತದೆ. ಜಲನಿರ್ಮಲ ಯೋಜನೆಯ ಅನುಷ್ಠಾನದಲ್ಲಿ ಸಣ್ಣಪುಟ್ಟ ದೂರುಗಳು ಬಂದಿದ್ದು, ಯಾವುದೇ ಭ್ರಷ್ಟಾಚಾರದ ನಿರ್ದಿಷ್ಟ ದೂರುಗಳು ಸರ್ಕಾರದ ಗಮನಕ್ಕೆ ಇದುವರೆವಿಗೂ ಬಂದಿರುವುದಿಲ್ಲ.

ಅನುಬಂಧ-1

ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆಯಡಿ ಯೋಜನಾ ಪ್ರಾರಂಭದಿಂದ ಮೇ-2010 ಮಾಸಾಂತ್ಯದವರೆಗೂ ವೆಚ್ಚ ಮಾಡಲಾದ ಜಿಲ್ಲಾವಾರು ಅಂಕಿ ಅಂಶಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಯೋಜನಾ ಜಿಲ್ಲೆ/ಕಛೇರಿ	ವೆಚ್ಚ
1	ಬಾಗಲಕೋಟೆ	3838.016
2	ಬೆಳಗಾಂ	16297.440

3	ಬೀದರ್	9746.163
4	ಬಿಜಾಪುರ	10797.590
5	ಧಾರವಾಡ	4759.198
6	ಗದಗ್	5166.581
7	ಗುಲ್ಬರ್ಗಾ	9356.916
8	ಹಾವೇರಿ	12894.130
9	ಕಾರವಾರ	4737.724
10	ಕೊಪ್ಪಳ	3489.205
11	ರಾಯಚೂರು	3379.378
12	ಬೆಂಗಳೂರು (ಕೇಂದ್ರ ಕಛೇರಿ)	2688.981
	ಒಟ್ಟು	**87151.322**

ಅನುಬಂಧ–2

ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆಯಡಿ ಕಳೆದ ಒಂದು ವರ್ಷದಿಂದ (ಏಪ್ರಿಲ್–2009 ರಿಂದ ಮೇ–2010ರವರೆಗೆ) ಸಾಧಿಸಲಾದ ಭೌತಿಕ ಮತ್ತು ಆರ್ಥಿಕ ಪ್ರಗತಿಗಳ ಜಿಲ್ಲಾವಾರು ಅಂಕಿ ಅಂಶಗಳ ವಿವರ:

ಕ್ರ.ಸಂ.	ಯೋಜನಾ ಜಿಲ್ಲೆ/ಕಛೇರಿ	ಭೌತಿಕ (ಸಂಖ್ಯೆಗಳಲ್ಲಿ)	ಆರ್ಥಿಕ (ರೂ. ಲಕ್ಷಗಳಲ್ಲಿ)
1	ಬಾಗಲಕೋಟೆ	7	45.37
2	ಬೆಳಗಾಂ	18	1140.62
3	ಬೀದರ್	7	199.37
4	ಬಿಜಾಪುರ	5	482.16
5	ಧಾರವಾಡ	4	164.07
6	ಗದಗ್	12	130.94

7	ಗುಲ್ಬರ್ಗಾ	12	345.22
8	ಹಾವೇರಿ	19	3082.41
9	ಕಾರವಾರ	2	254.18
10	ಕೊಪ್ಪಳ	6	217.30
11	ರಾಯಚೂರು	1	86.71
12	ಬೆಂಗಳೂರು (ಕೇಂದ್ರ ಕಛೇರಿ)	–	318.78
	ಒಟ್ಟು	**93**	**6467.13**

ಕೇಂದ್ರೀಯ ವಿದ್ಯಾಲಯ ಮಾದರಿಯ ಶಾಲೆ

426 (858) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಕೇಂದ್ರೀಯ ವಿದ್ಯಾಲಯ ಮಾದರಿಯ ಶಾಲೆಗಳನ್ನು ಪ್ರಾರಂಭಿಸುವ ಕುರಿತಾದ ವಿವರಗಳೇನು?

(ಆ) ಸದರಿ ಮಾದರಿ ಶಾಲೆಗಳನ್ನು ಪ್ರಾರಂಭಿಸುವ ಜಿಲ್ಲಾವಾರು ವಿವರಗಳೇನು?

(ಇ) ಹಾಗಿದ್ದಲ್ಲಿ ರಾಜ್ಯದ ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರಾರಂಭಿಸುವ ಈ ಶಾಲೆಗಳ ಉಪಯುಕ್ತತೆ ಮತ್ತು ಅನುಷ್ಠಾನದ ಕುರಿತ ವಿವರಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಪ್ರೌಢ ಶಿಕ್ಷಣದ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಡಿಯಲ್ಲಿ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕ್ ಗಳಲ್ಲಿ 2010–11ನೇ ಸಾಲಿನಿಂದ ಜಾರಿಗೆ ಬರುವಂತೆ ಮಾದರಿ ಶಾಲೆಗಳನ್ನು ತೆರೆಯಲು ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆ. ಸದರಿ ಶಾಲೆಗಳನ್ನು ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಕಟ್ಟಡ ನಿರ್ಮಾಣ ಮಾಡಿ ಆಯಾ ಬ್ಲಾಕಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸಿ ಕೊಡುವ ಉದ್ದೇಶವನ್ನು ಹೊಂದಿರುತ್ತದೆ.

(ಆ) ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

(ಇ) ಈ ಶಾಲೆಯು ಪೂರ್ಣ ಪ್ರಮಾಣದ ವಸತಿ ರಹಿತ ಶಾಲೆಯಾಗಿದ್ದು (Day School) ಅವಶ್ಯ ತರಗತಿ ಕೋಣೆಗಳು, ಪ್ರಯೋಗಾಲಯ, ಗ್ರಂಥಾಲಯ,